3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.**119/2018

ಪ್ರಾಸಾ 18

ಚಾಸಾ 27

| | |
|---|---|
| ಹೆಸರು | ಪಾಲಾಕ್ಷಪ್ರಭು.ಕೆ ಎನ್ |
| ತಂದೆಯ | ನಾಗರಾಜು |
| ವಯಸ್ಸು | 42 ವರ್ಷ |
| ಉದ್ಯೋಗ | ಪಿ.ಐ. ಮಹಿಳಾ ಠಾಣೆ, ಹಾಸನ |
| ವಾಸಸ್ಥಳ | ಹಾಸನ |

ಸಾಕ್ಷಿಯನ್ನು ದಿನಾಂಕ 12.11.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು ದಿಃ 03.10.2017 ರಿಂದ 17.02.2018 ರವರೆಗೆ ಮಧುಗಿರಿ ನಗರ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿಃ17.12.2017 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತಾರೆ. ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಂತರ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರ.ವ.ವರದಿಯನ್ನು ನಿಪಿ.23 ಎಂದು, ಸಾಕ್ಷಿಯ ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು. ನಂತರ ಕಡತವನ್ನುಮುಂದಿನ ತನಿಖೆಗಾಗಿ ಚಾಸಾ.28 ರವರಿಗೆ ಹಸ್ತಾಂತರಿಸಿರುತ್ತೇನೆ.

3) ದಿಃ19.12.2017 ರಂದು ನಮ್ಮ ಸಿಬ್ಬಂದಿಗಳ ಸಹಾಯದ ಮೇರೆಗೆ ಆರೋಪಿತರ ಇರುವಿಕೆಯ ಬಗ್ಗೆ ಖಚಿತ ಮಾಹಿತಿ ಬಂದಿದ್ದು ಶಂಭೋನಹಳ್ಳಿ ಗೇಟ್ ಹತ್ತಿರ ತೆರಳಿ 1 ರಿಂದ 6 ನೇ ಆರೋಪಿತರನ್ನು ವಶಕ್ಕೆ ತೆಗೆದುಕೊಂಡು 2 ನೇ ಆರೋಪಿ ಬಳಿ ಇದ್ದ KA.01.EE.8453 Bajaj Platinum ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದು ಆರೋಪಿತರು ಮತ್ತು ದ್ವಿಚಕ್ರ ವಾಹನವನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು. ಸದರಿ ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಮು.ಮಾ.20 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 4 ಮತ್ತು 6 ನೇ ಆರೋಪಿ ಪರ ಶ್ರೀ.S.N.R. ವಕೀಲರಿಂದ :**

3) ದೂರನ್ನು ನೀಡಲು ಚಾಸಾ.1 ರವರು ಒಬ್ಬರೇ ಬಂದಿದ್ದರು. ಚಾಸಾ.1 ರವರು ನಮ್ಮ ಠಾಣೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.1 ನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 6 ನೇ ಆರೋಪಿತರನ್ನು ನಾನು ವಶಕ್ಕೆ ತೆಗೆದುಕೊಂಡು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ಕಡೆಯಿಂದ ನಾನು ಯಾವುದೇ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 5 ನೇ ಆರೋಪಿ ಪರ ಶ್ರೀ.C.R. ವಕೀಲರಿಂದ :**

(5 ನೇ ಆರೋಪಿ ಪರ ವಕೀಲರು 4 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

(1 ರಿಂದ 3 ನೇ ಆರೋಪಿತರ ಪರ ವಕೀಲರು ಗೈರುಹಾಜರಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ